


SHARE MARKET

‘ನಿಮ್ಮ ಬಳಿಯಿರುವ 10 ಲಕ್ಷ ರೂಪಾಯಿಗಳನ್ನು ಷೇರುಪೇಟೆಯಲ್ಲಿ ಹೂಡಿಕೆ ಮಾಡಿದ್ದೀರಿ ಅಂದುಕೊಳ್ಳಿ. ನೀವು ಖರೀದಿಸಿದ್ದ ಷೇರುಗಳ ಮೌಲ್ಯ ಈಗ 5 ಲಕ್ಷಕ್ಕೆ ಬಂದಿದೆ. ನಿಮ್ಮ ಮುಂದಿನ ನಡೆಯೇನು?’

ಬೆಂಗಳೂರಿನ ಕದಿರೇನಹಳ್ಳಿಯ ಷೇರು ದಲ್ಲಾಳಿಯೊಬ್ಬರು ತಮ್ಮೆದುರಿದ್ದ ಭಾವಿ ಗ್ರಾಹಕನ ಎದುರು ಲೋಕಾರೂಢಿ ಮಾತನಾಡುತ್ತಾ ಮುಂದಿಟ್ಟ ಪ್ರಶ್ನೆಯಿದು. ಗಲಿಬಿಲಿಗೊಂಡಂತೆ ಕಂಡುಬಂದ ಅವರು ಆ ಕ್ಷಣಕ್ಕೆ ಏನೊಂದೂ ಉತ್ತರಿಸಲಿಲ್ಲ. ಷೇರು ದಲ್ಲಾಳಿ ಸೂಚಿಸಿದ ಸ್ಥಳಗಳಲ್ಲಿ ದಾಖಲೆ ಪತ್ರಗಳಿಗೆ ಸಹಿ ಹಾಕಿ, ‘ನಾಳೆ ಬರ್ತೀನಿ’ ಅಂತ ಹೊರಟರು.

ನನಗೆ ಕುತೂಹಲ ತಡೆಯಲು ಆಗದೆ, ‘ಇದೇನು ಆ ವ್ಯಕ್ತಿಯನ್ನು ಹೆದರಿಸಿದ್ರಲ್ಲಾ’ ಅಂತ ಕೇಳಿದೆ.

‘ನಮ್ಮ ಹತ್ತಿರ ಬರುವವರಿಗೆ ಸಾಮಾನ್ಯವಾಗಿ ಕೇಳುವ ಪ್ರಶ್ನೆಯಿದು. ಬಹುತೇಕ ಸಂದರ್ಭಗಳಲ್ಲಿ ಮೂರು ರೀತಿಯ ಉತ್ತರ ಸಿಗುತ್ತೆ. ಕೆಲವರು, ಇರೋ 5 ಲಕ್ಷ ವಾಪಸ್ ತಗೊಳ್ತೀನಿ ಅಂತಾರೆ. ಮತ್ತೆ ಕೆಲವರು ಎಲ್ಲಿಂದಾಲಾದ್ರೂ ಇನ್ನೂ 5 ಲಕ್ಷ ತಂದು ಹೂಡಿಕೆ ಮಾಡ್ತೀನಿ ಅಂತಾರೆ. ಹೂಡಿಕೆ ಮಾಡಿದ್ದ 10 ಲಕ್ಷ 5 ಲಕ್ಷ ಆಗೋತನಕ ನಾನೇನೂ ಸುಮ್ನೆ ಇರ್ತೀನಾ? 9 ಲಕ್ಷ ಆಗೋ ಹೊತ್ತಿಗೆ ವಾಪಾಸ್ ತಗೊಳ್ತಿದ್ದೆ ಎಂದು ಹೇಳುವವರೂ ಇದ್ದಾರೆ. ನನ್ನ ಪ್ರಶ್ನೆಗೆ ಎಂಥ ಉತ್ತರ ಕೊಡ್ತಾರೆ ಅನ್ನೋದರ ಮೇಲೆ ಅವರ ಷೇರುಪೇಟೆ ಜರ್ನಿ (ಪಯಣ) ಹೇಗಿರುತ್ತೆ ಅಂತ ಅಂದಾಜು ಮಾಡ್ತೀವಿ’ ಎಂದು ಆ ಷೇರು ದಲ್ಲಾಳಿ ತಮ್ಮ ವೃತ್ತಿಯ ಒಳಗುಟ್ಟೊಂದನ್ನು ನಗುನಗುತ್ತಾ ಬಿಟ್ಟುಕೊಟ್ಟರು.

ಈ ಸಂವಾದದಲ್ಲಿ ಬಳಸಿದ ‘ಪಯಣ’ ಪದಕ್ಕೆ ವಿಶೇಷ ಮಹತ್ವವಿದೆ. ಷೇರುಪೇಟೆಯಲ್ಲಿ ಬೆಳಿಗ್ಗೆ ಕೊಂಡು ಸಂಜೆಗೆ ಮಾರುವ ಟ್ರೇಡರ್, ಕೈಹಿಡಿದು ಮಾರ್ಗದರ್ಶನ ಮಾಡುವ ದಲ್ಲಾಳಿ, ಷೇರುಗಳ ಹೂಡಿಕೆಯನ್ನು ಆಸ್ತಿ ಎಂದುಕೊಳ್ಳುವ ಶಿಸ್ತಿನ ಹಿರಿಯರು ಸೇರಿದಂತೆ ಹಲವರೊಂದಿಗೆ ನಡೆಸಿದ ಸಂವಾದದಲ್ಲಿಯೂ ಪದೇಪದೆ ಪ್ರಸ್ತಾಪವಾಗುವುದು ಇದೇ ಪದ. ಷೇರುಪೇಟೆ ಪ್ರಪಂಚದಲ್ಲಿ ‘ಪಯಣ’ ಎಂಬುದಕ್ಕೆ ದೊಡ್ಡ ಅರ್ಥವಿದೆ.

ಆನಂದ್ ರಾಠಿ, ರಾಮ್‌ದೇವ್ ಅಗರ್‌ವಾಲ್, ರಾಕೇಶ್ ಜುಂಜುನ್‌ವಾಲಾ, ಪರಾಗ್ ಪರೀಖ್, ರಚನಾ ರಾನಡೆ, ಹರ್ಷ ಗೊಯೆಲ್ ಸೇರಿದಂತೆ ಭಾರತೀಯ ಷೇರು ಹೂಡಿಕೆದಾರರು ಗೌರವದಿಂದ ಕಾಣುವ ಹಲವರು ‘ಹ್ಯಾಪಿ ಜರ್ನಿ’ ಎಂದಾಗ ಅದು ಖಂಡಿತ ವಿದಾಯದ ಮಾತು ಆಗಿರುವುದಿಲ್ಲ. ‘ಹೊಸ ರೀತಿಯ ಹೂಡಿಕೆಗೆ ಸ್ವಾಗತ’ ಎಂದೇ ಆ ಮಾತನ್ನು ಷೇರುಪೇಟೆ ಅರಿತವರು ಅರ್ಥ ಮಾಡಿಕೊಳ್ಳುತ್ತಾರೆ.

## ಆಸಕ್ತಿಯ ಮಹಾಪೂರ

ಷೇರುಪೇಟೆಯಲ್ಲಿ ಜೂನ್ ತಿಂಗಳ ನಂತರ ‘ನ್ಯೂ ನಾರ್ಮಲ್’ (ಹೊಸ ಸಹಜಸ್ಥಿತಿ) ಎಂಬ ಪದಗುಚ್ಛವೊಂದು ಹೆಚ್ಚಾಗಿ ಬಳಕೆಯಾಗುತ್ತಿದೆ. ‘ಕೋವಿಡ್–9ರ ಪ್ರಭಾವದಿಂದ ರೂಪುಗೊಂಡ ಸಮಾಜ’ ಎಂಬುದು ಇದರ ಅರ್ಥ. ಪೇಟೆಯಲ್ಲಿ ಗಮನಾರ್ಹ ಸಾಧನೆಯನ್ನೋ, ತಳಕಚ್ಚಿದ ಕಂಪನಿಯ ಪರಿಸ್ಥಿತಿಯನ್ನೋ ವಿಶ್ಲೇಷಿಸುವಾಗ ‘ಕೋವಿಡ್‌ಗೆ ಮೊದಲು, ಕೋವಿಡ್ ನಂತರ’ ಎಂಬ ಎರಡು ಹಂತಗಳಲ್ಲಿ ವಿಶ್ಲೇಷಣೆಗಳ ತರ್ಕ ಬಿಚ್ಚಿಕೊಳ್ಳುತ್ತದೆ. ‘ಹೊಸ ಸಹಜಸ್ಥಿತಿ’ಯಲ್ಲಿ ಗುರುತಿಸಲೇಬೇಕಾದ ಮಹತ್ವದ ಬೆಳವಣಿಗೆ ಬ್ರೋಕಿಂಗ್ ಏಜೆನ್ಸಿಗಳಲ್ಲಿ ಆದ ತಂತ್ರಜ್ಞಾನದ ಕ್ರಾಂತಿ ಮತ್ತು ಚಿಲ್ಲರೆ ಹೂಡಿಕೆದಾರರು ಪ್ರವಾಹದೋಪಾದಿಯಲ್ಲಿ ಮಾರುಕಟ್ಟೆ ಪ್ರವೇಶಿಸಿದ್ದು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಮರ್ಜಿಯನ್ನೇ ಬಹುಮಟ್ಟಿಗೆ ಅವಲಂಬಿಸಿರುವ ಭಾರತೀಯ ಪೇಟೆಯಲ್ಲಿ ಚಿಲ್ಲರೆ ಹೂಡಿಕೆದಾರರು ಭವಿಷ್ಯದ ಆಶಾಕಿರಣವಾಗಿ ಕಂಗೊಳಿಸುತ್ತಿದ್ದಾರೆ. ಮ್ಯೂಚುವಲ್ ಫಂಡ್ ಹೌಸ್‌ಗಳಂಥ ದೇಶಿಯ ಸಾಂಸ್ಥಿಕ ಸಂಸ್ಥೆಗಳೂ ಪೇಟೆಯನ್ನು ದಿಢೀರ್ ಕುಸಿತದಿಂದ ಕಾಪಾಡಬಲ್ಲದು ಎಂಬ ವಿಶ್ವಾಸವೂ ನಿಧಾನವಾಗಿ ಮೂಡುತ್ತಿದೆ. ಈ ಎರಡೂ ಬೆಳವಣಿಗೆಗಳಿಗೆ ಮುಖ್ಯ ಕಾರಣ ಜನರಲ್ಲಿ ಷೇರುಪೇಟೆಯ ಬಗ್ಗೆ ಕಂಡುಬರುತ್ತಿರುವ ಆಸಕ್ತಿ. ಇದಕ್ಕೆ ಉದಾಹರಣೆಯಂತಿವೆ, ಹೊಸದಾಗಿ ಓಪನ್ ಆಗಿರುವ ಡಿಮಾಟ್ ಖಾತೆಗಳು ಮತ್ತು ಎಸ್‌ಐಪಿ ಫೋಲಿಯೊಗಳ ಸಂಖ್ಯೆ.

‘ಐಟಿ ಸೇರಿದಂತೆ ಬಹುತೇಕ ವೃತ್ತಿಗಳಲ್ಲಿ ವರ್ಕ್ ಫ್ರಂ ಹೋಂ ಸಾಮಾನ್ಯವಾಗಿದೆ. ಈ ಮೊದಲೂ ಹಲವರಿಗೆ ಷೇರುಪೇಟೆಯ ಬಗ್ಗೆ ಆಸಕ್ತಿಯಿತ್ತು, ಅವಕಾಶ ಇರಲಿಲ್ಲ. ಮನೆಯಿಂದ ಕೆಲಸ ಮಾಡುವ ಅವಕಾಶ ಸಿಕ್ಕಿದ್ದು ಅಂಥವರಿಗೆ ಅನುಕೂಲ ಕಲ್ಪಿಸಿಕೊಟ್ಟಿದೆ. ಲಾಕ್‌ಡೌನ್ ಕಾರಣದಿಂದ ಕೆಲಸ ಕಳೆದುಕೊಂಡ ಅಥವಾ ಕೆಲಸ ಕಳೆದುಕೊಳ್ಳುವ ಆತಂಕ ಎದುರಿಸುತ್ತಿರುವ ಹಲವರಿಗೆ ಷೇರುಪೇಟೆ ಸ್ವಂತ ಉದ್ಯೋಗದ ಆಯ್ಕೆಯಾಗಿ ಕಾಣಿಸುತ್ತಿದೆ.

### ಉಳಿದೀತೆ ಈ ಎತ್ತರ?

ಕೋವಿಡ್–19ಕ್ಕೆ ಶೀಘ್ರ ಔಷಧ ಸಿಗಬಹುದು. ಆರ್ಥಿಕ ಚಟುವಟಿಕೆಗಳು ಶೀಘ್ರ ಸಾಮಾನ್ಯ ಸ್ಥಿತಿಗೆ ಮರಳಲಿದೆ ಎಂಬ ನಿರೀಕ್ಷೆಯಿಂದಾಗಿ ಮಾರುಕಟ್ಟೆಯಲ್ಲಿ ಹಲವು ಷೇರುಗಳ ಬೆಲೆ ಏರಿದೆ. ಸಮಾಜದಲ್ಲಿ ಕಂಡು ಬರುತ್ತಿರುವ ವಾಸ್ತವ ಸ್ಥಿತಿಗಿಂತಲೂ ಷೇರುಪೇಟೆಯಲ್ಲಿ ವ್ಯವಹಾರ ಮಾಡುವವರು ಊಹಿಸಿರುವ ಸ್ಥಿತಿಯು ಚೆನ್ನಾಗಿದೆ. ಮುಂದಿನ ದಿನಗಳಲ್ಲಿ ಇದು ಸಾಕಾರಗೊಂಡರೆ ಈಗಿನ ಸ್ಥಿತಿಗಿಂತಲೂ ಷೇರುಪೇಟೆ ಮೇಲೇರಲಿದೆ. ನಿರೀಕ್ಷೆ ಈಡೇರದಿದ್ದರೆ ಪೇಟೆ ಈಗಿರುವ ಸ್ಥಿತಿಯಿಂದ ಕೆಳಗಿಳಿಯಲಿದೆ.

**–ನೀಲೇಶ್ ಶಾ**

ವ್ಯವಸ್ಥಾಪಕ ನಿರ್ದೇಶಕರು, ಕೋಟಕ್ ಮಹೀಂದ್ರ ಮ್ಯೂಚುವಲ್ ಫಂಡ್ಸ್